

ಹಲವಾರು ಭಾಷೆ, ಧರ್ಮ, ಆಹಾರ ಪದ್ಧತಿಗಳುಳ್ಳವರು ವಾಸಿಸುವ ಮನೆ. ಈ ಮನೆ ಸುಖವಾಗಿರಬೇಕಾದರೆ ಒಬ್ಬರ ಜೀವನ ಕ್ರಮವನ್ನು ಇನ್ನೊಬ್ಬರು ಗೌರವಿಸಬೇಕು, ಒಬ್ಬರ ಜೀವನಕ್ರಮ ಇನ್ನೊಬ್ಬರ ಬದುಕಿಗೆ ಮಾರಕವಾಗಬಾರದು, ಒಬ್ಬನ ಜೀವನಕ್ರಮವನ್ನು ಇನ್ನೊಬ್ಬನ ಮೇಲೆ ಹೇರಲೂಬಾರದು. ಈ ಜೀವನ ಕ್ರಮದಲ್ಲಿ ಮಾತು, ಊಟ, ಪ್ರಾರ್ಥನೆ ಎಲ್ಲವೂ ಬಂತು. ನಾಸ್ತಿಕನಾದವನೂ ಇನ್ನೊಬ್ಬನ ಪೂಜೆಗೆ ಅಡ್ಡಿಪಡಿಸಬಾರದು; ಆ ಪೂಜೆ ಸಮಾಜಕ್ಕೆ, ಪ್ರಕೃತಿಗೆ ಹಾನಿಯುಂಟುಮಾಡದ ಹೊರತು!

ಆದರೆ ಈಗ ಆಗುತ್ತಿರುವುದೇನು? ಕಳೆದ ಎಪ್ಪತ್ತು ವರ್ಷಗಳಲ್ಲಿ ಇರದ ಈ ಆಹಾರ, ಭಾಷೆ, ಧರ್ಮ ಸಾಮರಸ್ಯದ ಸಮಸ್ಯೆ ದಿಡೀರೆಂದು ಉದ್ಭವಿಸಲು ಕಾರಣವೇನೆಂದು ನಾವು ಯೋಚಿಸಬೇಕಾಗಿದೆ. ಒಗ್ಗಟ್ಟಾಗಿ ಬ್ರಿಟಿಷರನ್ನು ದೇಶದಿಂದ ಆಚೆಗೆ ಅಟ್ಟಿದವರ ಮಕ್ಕಳು, ಮರಿಮಕ್ಕಳು ಕೆಲವರು, ನಮ್ಮ ದೇಶದ ಚಿಂತಕರನ್ನೇ ಆಚೆಗಟ್ಟಲು ತುದಿಗಾಲಲ್ಲಿ ನಿಂತಿರೋದು ಇಂದಿನ ದುರಂತ. ರಾಷ್ಟ್ರೀಯತೆಯ ಕುಬ್ಜ ಕಲ್ಪನೆಯೊಂದಿಗೆ ಎಲ್ಲರನ್ನೂ ಒಂದು ಬೋನಿನೊಳಗೆ ತುರುಕಿಸುವ ಪ್ರಯತ್ನ ಇಂದು ನಡೆಯುತ್ತಿದೆ. ಅದರಿಂದ ಹೊರಗಿದ್ದು ವಿಶ್ವಮಾನವನ ಪ್ರಜ್ಞೆ ಬೆಳೆಸುವ ಅವಕಾಶ ಈ ಬೋನಿನೊಳಗೆ ಖಂಡಿತವಾಗಿಯೂ ಇಲ್ಲ. ವೈಚಾರಿಕ ಸ್ವಾತಂತ್ರ್ಯದ ಬಗ್ಗೆ ಮಾತಾಡುವ ಅಂಥವರನ್ನು ಗಡೀಪಾರು ಮಾಡುವತ್ತ ಈ ಸಮಾಜ ಸಾಗುತ್ತಿದೆ.

ಅಂದು ತುರ್ತಾಗಿ ಬೇಕಿದ್ದುದು ಬ್ರಿಟಿಷರಿಂದ ಸ್ವಾತಂತ್ರ್ಯ, ಆಡಳಿತಾತ್ಮಕವಾದ ಸ್ವಾತಂತ್ರ್ಯ. ಆದರೆ ಇಂದಿನ ತುರ್ತು ವೈಚಾರಿಕ ಸ್ವಾತಂತ್ರ್ಯ. ಈ ದೇಶದ ಪ್ರತಿಯೊಬ್ಬ ನಾಗರಿಕ ಸ್ವತಂತ್ರವಾಗಿ ಯೋಚಿಸಲು ಕಲಿಯಬೇಕಿದೆ. ಆಗ ಮಾತ್ರ ಇನ್ನೊಬ್ಬರ ರಾಜಕೀಯ ಅಥವಾ ಧಾರ್ಮಿಕ ಷಡ್ಯಂತ್ರಕ್ಕೆ ಬಲಿಯಾಗುವುದನ್ನು ತಪ್ಪಿಸಬಹುದು, ನಿಜವಾದ ಸ್ವಾತಂತ್ರ್ಯವನ್ನು ಅನುಭವಿಸಬಹುದು.

ಬಲಪಂಥೀಯ, ಬಹುಸಂಖ್ಯಾತ ಸಿದ್ಧಾಂತಗಳು ಬಲವಾಗುತ್ತಿವೆ ಮಾತ್ರವಲ್ಲ, ಅವುಗಳು ಅಲ್ಪಸಂಖ್ಯಾತರ ಮೇಲೆ ಅಧಿಕಾರ ಚಲಾಯಿಸಲು ಹಾತೊರೆಯುತ್ತಿವೆ. ಅಲ್ಪಸಂಖ್ಯಾತರನ್ನು, ದಲಿತರನ್ನು ಈ ದೇಶದ ಎರಡನೇ ದರ್ಜೆಯ ಪ್ರಜೆಗಳೆಂಬಂತೆ ನೋಡಲಾಗುತ್ತಿದೆ. ನಾನು ಯಾವುದೇ ಧರ್ಮದವನೆಂದು ಹೇಳಿಕೊಳ್ಳಲು ಇಷ್ಟಪಡಲಾರೆ, ಬದಲಾಗಿ ನಾನು ಈ ದೇಶದ ನಾಗರಿಕನೆಂದೇ ಹೇಳಿಕೊಳ್ಳಲು ಇಷ್ಟಪಡುವವನು. ನಾನು ಮಾನಸಿಕವಾಗಿ ಯಾವುದೇ ಧರ್ಮಕ್ಕೆ ಒಳಪಟ್ಟವನೂ ಅಲ್ಲ. ಆದರೆ ಈ ಸ್ವಾತಂತ್ರ್ಯದ ಬಗ್ಗೆ ಮಾತಾಡುವಾಗ, ಸ್ವಾತಂತ್ರ್ಯವನ್ನು ಗಳಿಸಿಕೊಡುವಲ್ಲಿ ಮುಸ್ಲಿಮ್, ಕ್ರಿಶ್ಚಿಯನ್ ಸಮುದಾಯದವರ ಪಾತ್ರವೂ ಇತ್ತೆಂಬ ವಾಸ್ತವವನ್ನು ಮರೆಮಾಚಲು ಸಾಧ್ಯವಿಲ್ಲ. ಆದರೆ ಇತ್ತೀಚೆಗೆ ಈ ಸಮುದಾಯದವರನ್ನು 'ಈ ದೇಶದವರಲ್ಲ' ಎಂಬಂತೆ ಅನುಮಾನದಿಂದ ಹಾಗೂ ಅವಿಶ್ವಾಸದಿಂದ ನೋಡಲಾಗುತ್ತಿದೆ. ಮುಸ್ಲಿಮರನ್ನು ಪಾಕಿಸ್ತಾನದ ಜೊತೆಗೆ ಸಂಬಂಧ ಕಲ್ಪಿಸಿದರೆ, ಕ್ರಿಶ್ಚಿಯನ್ನರನ್ನು ಬ್ರಿಟಿಷರ ಸಂಬಂಧಿಕರೆಂಬಂತೆ ಬಿಂಬಿಸುವುದನ್ನು ಸಾಮಾಜಿಕ ಜಾಲತಾಣಗಳಲ್ಲಿ ನೋಡಬಹುದು. ಇಲ್ಲಿನ ಕ್ರಿಶ್ಚಿಯನ್ ಜನತೆ, ಯುರೋಪ್ ರಾಷ್ಟ್ರಗಳಿಂದ ಇಲ್ಲಿ ಬಂದು ನೆಲೆ ನಿಂತವರಲ್ಲ, ಬದಲಾಗಿ ಇಲ್ಲಿನ ಮೂಲನಿವಾಸಿಗಳೇ. ಅನೇಕ ಕಾರಣಗಳಿಗಾಗಿ ಮತಾಂತರ ಹೊಂದಿರಬಹುದು, ಅದು ಅವರ ಧಾರ್ಮಿಕ ಹಕ್ಕು. ಬಲವಂತವಾಗಿಯೂ ಮತಾಂತರ ಹೊಂದಿರಬಹುದು. ಆದರೆ ಇಂದು ಆರಿದ ಆ ಗಾಯವನ್ನು ಮತ್ತೆ ಕೆದಕಬೇಕಿಲ್ಲ. ಒಂದು ವೇಳೆ ಕೆದಕಬೇಕಿದ್ದರೂ ಗಾಯವಾದವರೇ ಕೆದಕಬೇಕೇ ಹೊರತು ಇತರರಲ್ಲ. ಕ್ರಿಶ್ಚಿಯನ್ನರೂ ಈ ನೆಲದ ಮಕ್ಕಳೇ. ಸ್ವಾತಂತ್ರ್ಯ ಹೋರಾಟಗಳಲ್ಲಿ ಅವರು ಭಾಗಿಯಾಗಿದ್ದಾರೆ ಎಂಬುವುದಕ್ಕೆ ಪುರಾವೆಗಳೂ ಇವೆ. ಇದಕ್ಕೂ ಮಿಗಿಲಾಗಿ, ಸ್ವಾತಂತ್ರ್ಯೋತರ ವರ್ಷಗಳಲ್ಲಿ ಆರೋಗ್ಯ, ಶಿಕ್ಷಣ ಕ್ಷೇತ್ರಗಳ ಮೂಲಕ ಜನಜೀವನವನ್ನು ಉತ್ತಮ ಪಡಿಸುವುದರಲ್ಲಿ ಕ್ರಿಶ್ಚಿಯನ್ನರ ಪಾತ್ರವನ್ನು ಯಾರೂ ಅಲ್ಲಗಳೆಯುವಂತಿಲ್ಲ. ಆರ್ಥಿಕತೆ ಬೆಳೆಯುವುದರಲ್ಲಿಯೂ ಈ ಸಮುದಾಯ ಅತ್ಯಂತ ಮಹತ್ವದ ಪಾತ್ರವಹಿಸಿದೆ.

ನಾನು ಹುಟ್ಟಿ ಬೆಳೆದ ಪರಿಸರವೇ ನಮ್ಮ ದೇಶದ ಭಾಷಿಕ ಹಾಗೂ ಸಾಂಸ್ಕೃತಿಕ ಒಗ್ಗಟ್ಟಿಗೆ ಮಾದರಿ. ಇಲ್ಲಿ ಹಿಂದೂ, ಮುಸ್ಲಿಮ್, ಕ್ರಿಶ್ಚಿಯನ್ನರು ಭಾವೈಕ್ಯತೆಯಿಂದ ಬದುಕಿದ್ದರು. ಯಾವುದೇ ಸಮುದಾಯದ ಹಬ್ಬಗಳು ಆ ಸಮುದಾಯಗಳಿಗಷ್ಟೇ ಸೀಮಿತವಾಗಿರದೆ ಎಲ್ಲಾ ಸಮುದಾಯಗಳೂ ಸಂಭ್ರಮಿಸುತ್ತಿದ್ದವು. ತುಳು, ಕೊಂಕಣಿ, ಬ್ಯಾರಿ, ಕನ್ನಡ ಎಲ್ಲಾ ಭಾಷೆಗಳೂ ಅರ್ಥವಾಗುತ್ತಿದ್ದವು. ಇಂತಹ ವಾತಾವರಣ ಇಂದು ಕಲುಷಿತಗೊಂಡಿದೆ. ಇದಕ್ಕೆ ಕಾರಣ ಬ್ರಿಟಿಷರಲ್ಲ, ಇದೇ ದೇಶದ ಸ್ವಾರ್ಥ ರಾಜಕಾರಣ. ಇದರಿಂದ ಹೊರಬರಬೇಕಾದರೆ ಸ್ವತಂತ್ರವಾಗಿ ಚಿಂತಿಸುವುದನ್ನು, ವಿಶ್ಲೇಷಣೆ ಮಾಡುವುದನ್ನು ಕಲಿಯಬೇಕು. ಹೀಗೆ ಕಲಿಯಲು ಮನಸ್ಸು ಸ್ವತಂತ್ರವಾಗಿರಬೇಕು. ನಮ್ಮ ಮನಸ್ಸು ನಾವು ಕೇಳುವಂತಿರಬೇಕೇ ಹೊರತು, ಇನ್ನೊಬ್ಬರು ಹೇಳಿದ್ದನ್ನು ವಿವೇಚಿಸದೆ ಪಾಲಿಸಲು ಬಿಡಬಾರದು. ಬ್ರಿಟಿಷರ ದೇಶ, ಗಡಿಗೆ ಸೀಮಿತವಾಗಿದ್ದ 'ಸ್ವಾತಂತ್ರ್ಯ', ಇಂದು ನಮ್ಮ ಮನಸ್ಸನ್ನು ಪ್ರವೇಶಿಸಬೇಕು. ಇದು ಇಂದಿನ ತುರ್ತು.

ಎಲ್ಲಾ ಸಮುದಾಯಗಳೂ ಈ ದೇಶಕ್ಕೆ ಏನನ್ನಾದರೂ ಕೊಟ್ಟಿವೆ. ವೈಜ್ಞಾನಿಕವಾಗಿ ಏನನ್ನೂ ಕೊಡದಿದ್ದರೂ ಈ ದೇಶಕ್ಕೆ ಭಿನ್ನ ಭಿನ್ನ ಸಂಸ್ಕೃತಿಗಳನ್ನು ಕೊಟ್ಟ ಹಲವಾರು ಸಣ್ಣಪುಟ್ಟ ಸಮುದಾಯಗಳಿವೆ. ಈ ಎಲ್ಲಾ ಸಮುದಾಯಗಳ ಒಟ್ಟು ಮೊತ್ತವೇ ದೇಶ. ದೇಶಪ್ರೇಮವೆಂದರೆ ದೇಶದ ಜನರನ್ನು ಪ್ರೀತಿಸುವುದು.

ದ್ವೇಷ, ಅಜ್ಞಾನ, ಮಾನಸಿಕ ಗುಲಾಮಗಿರಿ ಈ ಎಲ್ಲವುಗಳಿಂದಲೂ ಸ್ವತಂತ್ರ ಹೊಂದಿದ ಮನಸುಗಳು ಎಲ್ಲೆಲ್ಲೂ ರಾರಾಜಿಸಲಿ. ಇಂತಹ ಮನಸುಗಳಿಗೆ ಮಾತ್ರ ಸ್ವಾತಂತ್ರ್ಯ ದಿನದಂದು ಧ್ವಜಾರೋಹಣ ಮಾಡುವ ನೈತಿಕ ಹಕ್ಕಿದೆ ಎಂಬುವುದು ನನ್ನ ಅಭಿಪ್ರಾಯ.